ಮಾಡಿದರೂ ಕೂಡ, ಹತ್ತು ವರ್ಷಗಳಲ್ಲಿ ಈ ಹಣ ವಾಪಸ್ಸು ಬರುತ್ತದೆ. ಇದಂ ಹೆವಿ ವೆಹಿಕ್ಯೂಲರ್ ಟ್ರಾಫಿಕ್ ರಸ್ತೆ ಇದೆ ಸರ್ಕಾರ ಇದಕ್ಕೆ ಒಂದು ಯಾವುದಾದರೂ ಸ್ವರೂಪ ಕೊಡುತ್ತದೆ. ಇದಕ್ಕೆ ಬಹಳ ಕಾಳಜಿ ವಹಿಸುತ್ತೇವೆ ಎಂಬ ಮಾತನ್ನು ಹೇಳುತ್ತಾ, ಇದನ್ನು ಎಕ್ಸ್‌ಪ್ರೆಸ್ ಹೈವೇ ಮಾಡಬೇಕೆಂಬ ಅಪೇಕ್ಷೆ ನಮಗೆ ಇದೆ ಎಂದು ಹೇಳಿಂತ್ತೇನೆ.

ಅಧ್ಯಕ್ಷರು.—೪೨೩ (೯೯೦) ನಂಬರಿನ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಕಾಪು ಕ್ಷೇತ್ರದಲ್ಲಿಯಂ ಉಪ್ಪು ನೀರು ತಡೆ ಆಣೆಕಟ್ಟುಗಳ ರಿಪೇರಿ ಬಗ್ಗೆ.

೧೦೭೫. ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಪು ಕ್ಷೇತ್ರದ ೧೨ ಮಂಡಲ ಪಂಚಾಯತ್‌ಗಳಲ್ಲಿ ಒಟ್ಟು ಎಷ್ಟು ಉಪ್ಪು ನೀರು ತಡೆ ಆಣೆಕಟ್ಟುಗಳಿವೆ ?

ಆ) ಇವುಗಳಲ್ಲಿ ಎಷ್ಟು ಆಣೆಕಟ್ಟುಗಳು ನಾದುರಸ್ತಿಯಲ್ಲಿವೆ ?

ಇ) ಸದರಿ ಆಣೆಕಟ್ಟುಗಳನ್ನು ಯಾವಾಗ ದುರಸ್ತಿ ಮಾಡಲಾಗುವುದು ಹಾಗೂ ಇದಕ್ಕೆ ಎಷ್ಟು ವೆಚ್ಚವಾಗುವುದು ?

ಈ) ಈ ವೆಚ್ಚಕ್ಕೆ ಬೇಕಾದ ಹಣವನ್ನು ಕೂಡಲೇ ಮಂಜೂರು ಮಾಡಿ ದುರಸ್ತಿ ಕಾರ್ಯ ಪ್ರಾರಂಭಿಸುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೬

ಆ) ೪ ಆಣೆಕಟ್ಟುಗಳು ಕೆಲಸ ಮಾಡುತ್ತಿಲ್ಲ. ೨ ಆಣೆಕಟ್ಟುಗಳಿಗೆ ಸಣ್ಣ ಪುಟ್ಟ ರಿಪೇರಿ ಅವಶ್ಯಕ.

ಇ)
ಮತ್ತು } ಸುಮಾರು ೯.೯೦ ಲಕ್ಷ ರೂ. ವೆಚ್ಚವಾಗುವುದು. ಹಣಕಾಸಿನ ಲಭ್ಯತೆಯನ್ನ
ಈ) } ವಲಂಬಿಸಿ, ಕ್ರಮ ತೆಗೆದುಕೊಳ್ಳಲಾಗುವುದು.

ಜೊತೆಗೆ ಇನ್ನೊಂದು ವಿಚಾರ ಹೇಳುವುದಾದರೆ ಇನ್ನು ಮುಂದೆ ಇವೆಲ್ಲಾ ಚಿಲ್ಲಾ ಪರಿಷತ್‌ನ ವ್ಯಾಪ್ತಿಗೆ ಹೋಗುತ್ತವೆ.

ಶ್ರೀ ವಸಂತ ವಿ. ಸಾಲ್ಯಾನ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ೧೨ ಮಂಡಲ್ ಪಂಚಾಯಿತಿಗಳಲ್ಲಿ ೬ ಆಣೆಕಟ್ಟುಗಳು ಇವೆ ಎಂದು ಹೇಳಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಸಚಿವರಿಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ನನ್ನ ಗಮನಕ್ಕೆ ಬಂದಿರುವ ಪ್ರಕಾರ ೧೫ ಆಣೆಕಟ್ಟುಗಳು ಇವೆ. ಇದರಲ್ಲಿ ೪ ಆಣೆಕಟ್ಟುಗಳು ಕೆಲಸ ಮಾಡುತ್ತಿಲ್ಲ, ಎರಡು ಆಣೆಕಟ್ಟುಗಳಿಗೆ ಸಣ್ಣ ರಿಪೇರಿ ಎಂದು ಹೇಳಿದ್ದಾರೆ. ನನ್ನ ಲೆಕ್ಕದಲ್ಲಿ ಅದರಲ್ಲಿ ಸುಮಾರು ೧೦ ಆಣೆಕಟ್ಟುಗಳು ಈಗಲೂ ಕೆಲಸ ಮಾಡುತ್ತಿಲ್ಲ. ಪಲಿಮಾರು ೧೦ ವರ್ಷದಿಂದ ಈ ಆಣೆಕಟ್ಟುಗಳು ರಿಪೇರಿ ಆಗಿಲ್ಲ. ಉದಾಹರಣೆಗೆ ಮಟ್ಟು ಮತ್ತು ಪಲಿಮಾರು ಆಣೆಕಟ್ಟುಗಳು ಈಗಲೂ ಕೆಲಸ ಮಾಡುತ್ತಿಲ್ಲ. ೯ ಲಕ್ಷದ ೯೦ ಸಾವಿರ ರೂಪಾಯಿಗಳನ್ನು ಈ ೬ ಆಣೆಕಟ್ಟುಗಳ ರಿಪೇರಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈ ತನಕ ಅಲ್ಲಿನ ಹಲಗೆಗಳನ್ನೂ ಕೂಡ ಬದಲಾವಣೆ ಮಾಡಿಲ್ಲ, ರಿಪೇರಿ ಮಾಡಿಲ್ಲ. ಆದ್ದರಿಂದ ನೀವು ಕೊಟ್ಟಿರುವ ೯ ಲಕ್ಷ ೯೦ ಸಾವಿರ ರೂಪಾಯಿಗಳು ಸಾಕಾಗುವುದಿಲ್ಲ. ಕೊನೆಯ ಪಕ್ಷ ೧೫ ಲಕ್ಷ ರೂಪಾಯಿಗಳಾದರೂ ನನ್ನ ಕ್ಷೇತ್ರಕ್ಕೆ ಕೊಡಬೇಕು, ಈ ವರ್ಷವೇ ಕೊಡಬೇಕು. ಮತ್ತು ಈ ಎಲ್ಲಾ ಆಣೆಕಟ್ಟುಗಳನ್ನೂ ತುರ್ತಾಗಿ ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಮಾನ್ಯ ಸದಸ್ಯರು ಹೇಳತಕ್ಕಂಥಾದ್ದು ವಾಸ್ತವಾಂಶದಿಂದ ಕೂಡಿದೆ. ಅದರಲ್ಲಿ ಏನೊ ಉತ್ಪ್ರೇಕ್ಷೆ ಇಲ್ಲ. ಇದಕ್ಕೆ ೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡ ಬೇಕಾಗಬಹುದು, ಈ ಬಗ್ಗೆ ವರದಿ ಬಂದಿದೆ. ಈ ವರದಿ ೧೯೭೭–೭೮ರಲ್ಲಿಯೇ ಬಂದಿದೆ. ಆದರೆ ಇಂದು ಕೆ.ಆರ್.ಎಸ್. ರೀಸರ್ಚ್ ಇನ್‌ಸ್ಟಿಟ್ಯೂಟ್‌ನವರು ಕೆಲವೊಂದು ಮಾಹಿತಿ ಕೇಳಿದ್ದಾರೆ.

ಒಂದುಕಡೆ ಈ ಉಪ್ಪು ನೀರು ಆಣೆಕಟ್ಟು ಡ್ಯಾಮೇಜ್ ಆಗುವುದಕ್ಕೆ ಒಂದು ಕಾರಣ ಎಂದು ಹೇಳಿದ್ದಾರೆ. ಹಿಂದಿನ ಮಾಹಿತಿಯಿಂದ ಹಲವಾರು ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳ ಬೇಕಾಗುತ್ತದೆ. ನನಗೆ ಈ ಸದನದ ಅನುಮತಿ ಇದೆ. ಬರುವ ಏಪ್ರಿಲ್ ೧ ರಿಂದ ಇವೆಲ್ಲಾ ಸ್ಥಳೀಯ ಸಂಸ್ಥೆಗಳ ವಶಕ್ಕೆ ಹೋಗುತ್ತವೆ. ನಾನು ತಾಂತ್ರಿಕವಾಗಿ ಏನೇನು ಮಾಹಿತಿ ಒದಗಿಸಬೇಕೋ, ಪರಿಣತ ರಿಂದ ಸೂಚನೆ ಕೊಡಬೇಕೋ ಅವೆಲ್ಲವನ್ನೂ ಮಾಡುತ್ತೇನೆ. Technical guidence or advice I can give.

ಶ್ರೀ ವಸಂತ ವಿ. ಸಾಲ್ಯಾನ.— ೧೯೮೫ನೇ ಇಸವಿಯಿಂದ ಜನತಾ ಪಕ್ಷದ ಸರ್ಕಾರ ಬಂದಮೇಲೆ ಇದುವರೆಗೂ ಈ ಕೆಲಸವನ್ನು ಮಾಡಬಹುದಿತ್ತು, ಮಟ್ಟು ಆಣೆಕಟ್ಟು ವಿಚಾರವಾಗಿ ಅನೇಕಬಾರಿ ಮನವಿ ಸಹ ಕೊಟ್ಟಿದ್ದೇನೆ. ಸಾವಿರಾರು ಎಕರೆ ಭೂಮಿ ಹಾಗೆಯೇ ಬಿದ್ದಿದೆ. ಒಂದು ಬೆಳೆಯನ್ನೂ ಬೆಳೆಯುವುದಕ್ಕಾಗುವುದಿಲ್ಲ. ಆದುದರಿಂದ ಈ ಮಟ್ಟು ಆಣೆಕಟ್ಟನ್ನು ಈ ಸಾಲಿನಲ್ಲಿಯೇ ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನನಗೆ ಇಲ್ಲಿ ಪಕ್ಷದ ರಾಜಕಾರಣ ಮಾಡಬೇಕೆಂದು ಇಲ್ಲ. ನಿಮ್ಮ ಗಮನಕ್ಕೆ ತರುತ್ತೇನೆ. ಏಕೆಂದರೆ ಹಣ ಕೊಟ್ಟಿರುವುದು ಕಡಿಮೆ.

The following repair works have been carried out during 1985–86. I do not want to mix politics in these matters.

i) Providing planks to S. W. E. D. at Nadsal in Udupi taluk Rs. 10,000/–

ii) Providing planks to S.W.E.D. at Arroor in Udupi taluk Rs. 10,000/–

iii) Providing planks to Palimar Aniovt in Udupi taluku Rs. 10,000/—

iv) Providing planks to S.W.E.D. at Kurkal Rs. 10.

ಈ ವರ್ಕ್ಸ್ ತೆಗೆದುಕೊಂಡಿದ್ದೇವೆ. ಕೆ. ಆರ್. ಎಸ್. ರೀಸರ್ಚ್ ಇನ್‌ಸ್ಟಿಟ್ಯೂಟ್‌ನವರು ರಿಪೇರಿ ಮತ್ತಿತರ ಎಲ್ಲಾ ವರದಿ ಕೊಡುತ್ತೇವೆಂದು ಹೇಳಿದ್ದಾರೆ. ನಿಮ್ಮ ಪರವಾಗಿ ಮಾನ್ಯ ನಜೀರ್‌ಸಾಬ್ ರವರನ್ನೂ ಇದರ ಬಗ್ಗೆ ವಿಶೇಷವಾದ ಗ್ರಾಂಟ್ ಏನಾದರೂ ಕೊಡುವುದಕ್ಕೆ ಸಾಧ್ಯವಿದ್ದರೆ, ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಗಂಬ್ಳಿ ತಾಲ್ಲೂಕಿನಲ್ಲಿರುವ ಚೇಳೂರಿನ ಮಹಾತ್ಮಗಾಂಧಿ ಸ್ಮಾರಕ ಮಹಾ ವಿದ್ಯಾಲಯ

೭೧. ಶ್ರೀ ಜಿ. ಎಸ್. ಶಿವಸಂಜಪ್ಪ (ಗಂಬ್ಳಿ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಳಿ ತಾಲ್ಲೂಕು ಚೇಳೂರಿನ ಮಹಾತ್ಮಾಗಾಂಧಿ ಸ್ಮಾರಕ ವಿದ್ಯಾ ಸಂಸ್ಥೆಯವರ ಕಿರಿಯ ಕಾಲೇಜಿಗೆ ಮಂಜೂರಾತಿಯನ್ನು ಯಾವ ವರ್ಷದಲ್ಲಿ ನೀಡಲಾಯಿತು ?

ಆ) ಸದರಿ ಕಾಲೇಜನ್ನು ಯಾವ ಕಟ್ಟಡದಲ್ಲಿ ನಡೆಸಲಾಗುತ್ತಿದೆ ?

ಇ) ಸದರಿ ವಿದ್ಯಾ ಸಂಸ್ಥೆಯವರ ಬಗ್ಗೆ ದೂರುಗಳು ಏನಾದರೂ ಬಂದಿವೆಯೇ ?